# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ವಿರಾಜಪೇಟೆ

**ಸಿ.ಸಿ. ಸಂಖ್ಯೆ : 369/2023**

ಚಾಸಾ : 1
ಪ್ರಾಸಾ : 1

| | | |
|---|---|---|
| **ಹೆಸರು** | : | ಮದನ್ ಕುಮಾರ್ ವಿ |
| **ತಂದೆಯ ಹೆಸರು** | : | ವೀರಾಜ್ |
| **ವಯಸ್ಸು** | : | 32 ವರ್ಷ |
| **ಉದ್ಯೋಗ** | : | ಪಿ ಎಸ್ ಐ, ಕುವೆಂಪುನಗರ ಪೋಲಿಸ್ ಠಾಣೆ, ಮೈಸೂರು |
| **ವಾಸಸ್ಥಳ** | : | ಮೈಸೂರು |

**ದಿನಾಂಕ : 16-01-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ : ಮಾನ್ಯ ಸ. ಸ. ಅ. ರವರಿಂದ ಃ -**

ನಾನು ದಿನಾಂಕ 01-02-2023 ರಿಂದ 05-06-2023 ರವರೆಗ ವಿರಾಜಪೇಟೆ ನಗರ ಪೋಲಿಸ್ ಠಾಣೆಯಲ್ಲಿ ಪಿ ಎಸ್ ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿನಾಂಕ 27-02-2023 ರಂದು ಬೆಳಿಗ್ಗೆ ಸುಮಾರು 11.30 ಗಂಟೆಗೆ ನಾನು ನಮ್ಮ ಸಿಬ್ಬಂದಿಗಳಾದ ಚಾಸಾ3 ರಿಂದ 5 ರವರೊಂದಿಗೆ ಇಲಾಖಾ ಜೀಪಿನಲ್ಲಿ ವಿರಾಜಪೇಟಯ ನಗರದಲ್ಲಿ ರೌಂಡ್ಸ್ ಕರ್ತವ್ಯದಲ್ಲಿದ್ದಾಗ ಬಾತ್ಮಿದಾರರಿಂದ ಆರೋಪಿಯು ವಿರಾಜಪೇಟೆಯ ಕಾವೇರಿ ಕಾಲೇಜಿನ ಬಳಿ ಸಾರ್ವಜನಿಕ ಬಸ್ ತಂಗುದಾಣದ ಬಳಿ ಮಧ್ಯಾಹ್ನ 1 ರಿಂದ 2 ಗಂಟೆಯ ನಡುವೆ ಅಕ್ರಮವಾಗಿ ಮಧ್ಯ ಮಾರುವುದಾಗಿ ಮಾಹಿತಿ ಬಂದಿದ್ದು, ಸದರಿ ಮಾಹಿತಿಯ ಆಧಾರದ ಮೇಲೆ ಠಾಣೆಗೆ ಹೋಗಿ ಸ್ವವರದಿಯನ್ನು ತಯಾರಿಸಿ, ಸದರಿ ಸ್ವವರದಿಯನ್ನು ಹೊಂದಿಕೊಂಡು ಠಾಣಾ ಮೊ ಸಂ. 18/2023 ರಂತೆ ಪ್ರ ವ ವರದಿಯನ್ನು ದಾಖಲಿಸಿ ಅದನ್ನು ನ್ಯಾಯಾಲಯಕ್ಕೆ ಹಾಗೂ ನಮ್ಮ ಮೇಲಾಧಿಕಾರಿಯವರಿಗೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಅದು ತಾನು ಈ ಪ್ರಕರಣದಲ್ಲಿ ತಯಾರಿಸಿದ ಸ್ವವರದಿ ಎಂದು ಗುರುತಿಸಿ, ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ಸ್ವವರದಿಯನ್ನು ನಿಪಿ1 ಎಂದು, ಸಾಕ್ಷಿಯ ಸಹಿಯನ್ನು ನಿಪಿ1(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಅದು ತಾನು ಈ ಪ್ರಕರಣದಲ್ಲಿ ದಾಖಲಿಸಿದ ಪ್ರಥಮ ವರ್ತಮಾನ ವರದಿ ಎಂದು ಗುರುತಿಸಿ, ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಸದರಿ ಪ್ರ

ವ ವರದಿಯನ್ನು ಗುರುತಿಸಿದ ಮೇರೆಗೆ ಸದರಿ ಪ್ರಥಮ ವರ್ತಮಾನ ವರದಿಯನ್ನು ನಿಪಿ2 ಎಂದು, ಸಾಕ್ಷಿಯ ಸಹಿಯನ್ನು ನಿಪಿ2 ಎ ಎಂದು ಗುರುತಿಸಲಾಯಿತು.

ನಂತರ ಠಾಣೆಗೆ ಪಂಚಾಯಿತಿದಾರರಾದ ಚಾಸಾ6 ಹಾಗೂ 7 ರವರನ್ನು ಕರೆಯಿಸಿ, ಅವರಿಗೆ ಪ್ರಕರಣದ ವಿಚಾರವನ್ನು ತಿಳಿಸಿ ದಾಳಿಯ ಸಮಯದಲ್ಲಿ ಪಂಚರಾಗಿ ಸಹಕರಿಸುವಂತೆ ಕೋರಿ, ನೋಟಿಸನ್ನು ಜಾರಿ ಮಾಡಿದ್ದು, ಅವರು ಅದಕ್ಕೆ ಒಪ್ಪಿಕೊಂಡಿದ್ದು, ನಂತರ ಸದರಿ ಪಂಚಾಯಿತಿದಾರರಾದ ಚಾಸಾ6 ಹಾಗೂ 7 ಹಾಗೂ ನಮ್ಮ ಸಿಬ್ಬಂದಿಗಳಾದ ಚಾಸಾ2 ರಿಂದ 5 ರವರನ್ನು ಕರೆದುಕೊಂಡು ಮಧ್ಯಾಹ್ನ ಸುಮಾರು 1.15 ಕ್ಕೆ ಇಲಾಖಾ ಜೀಪಿನಲ್ಲಿ ಠಾಣೆಯಿಂದ ಹೊರಟು ಕೃತ್ಯ ಸ್ಥಳವಾದ ಕಾವೇರಿ ಕಾಲೇಜಿನ ಬಳಿ ಹೋಗಿದ್ದು, ಆರೋಪಿಯು ಅಲ್ಲಿ ಬಸ್ ತಂಗುದಾಣದಲ್ಲಿ ನಿಂತಿದ್ದು ಅವರ ಕೈಯಲ್ಲಿ ಒಂದು ಬಿಳಿ ಬಟ್ಟೆಯ ಬ್ಯಾಗ್ ಇದ್ದಿದ್ದು, ಪಂಚರ ಸಮಕ್ಷಮ ನಾವು ಹೋಗಿ ನೋಡಲಾಗಿ ಸದರಿ ಬಿಳಿ ಬಟ್ಟೆಯ ಒಳಗೆ ಮಧ್ಯದ ಟೆಟ್ರಾ ಪ್ಯಾಕೆಟ್ ಗಳಿರುವುದು ಕಂಡು ಬಂದಿರುತ್ತದೆ. ನಂತರ ಈ ಬಗ್ಗೆ ಆರೋಪಿಯನ್ನು ಸದರಿ ಮಧ್ಯದ ಟೆಟ್ರಾ ಪ್ಯಾಕೆಟ್ ಗಳನ್ನು ಇಟ್ಟುಕೊಳ್ಳಲು ಪರವಾನಗಿ ಇದೆಯೇ ಎಂದು ಕೇಳಲಾಗಿ, ಆರೋಪಿಯು ಆ ರೀತಿ ಯಾವುದೇ ಪರವಾನಗಿ ಇರುವುದಿಲ್ಲ ಎಂದು ತಿಳಿಸಿರುತ್ತಾರೆ. ನಂತರ ಪಂಚರ ಸಮಕ್ಷಮ ಸದರಿ ಬಟ್ಟೆಯ ಬ್ಯಾಗ್ ನ್ನು ಪರಿಶೀಲಿಸಲಾಗಿ ಅದರಲ್ಲಿ ಅದರಲ್ಲಿ 90 ಎಂ ಎಲ್ ನ ಸಿಲ್ವರ್ ಕಪ್ ಇಂಡಿಯನ್ ಬ್ರಾಂಡಿಯ ಒಟ್ಟು 48 ಮಧ್ಯದ ಟೆಟ್ರಾ ಪ್ಯಾಕೆಟ್ ಗಳಿರುವುದು ಕಂಡು ಬಂದಿರುತ್ತದೆ. ನಂತರ ಆರೋಪಿಯ ಪಂಚರ ಸಮಕ್ಷಮ ವಿಚಾರಿಸಲಾಗಿ, ಆರೋಪಿಯು ತಾನು ಈಗಾಗಲೇ ಮಾರಾಟ ಮಾಡಿ ಬಂದ ನಗದು ಹಣ ರೂ. 350/- ಗಳನ್ನು ನನ್ನ ಮುಂದೆ ಹಾಜರುಪಡಿಸಿದ್ದು, ನಂತರ ಪಂಚರ ಸಮಕ್ಷಮ ಮಹಜರ ಕ್ರಮ ಜರುಗಿಸಿ, ಸದರಿ 48 ಮಧ್ಯದ ಟೆಟ್ರಾ ಪ್ಯಾಕೆಟ್ ಗಳಲ್ಲಿ ರಾಸಾಯನಿಕ ಪರೀಕ್ಷೆಯ ಸಲುವಾಗಿ 28 ಮಧ್ಯದ ಟೆಟ್ರಾ ಪ್ಯಾಕೆಟ್ ಗಳನ್ನು ಪ್ರತ್ಯೇಕವಾಗಿ ತೆಗೆದು ಬಿಳಿಯ ಬಟ್ಟೆಯಲ್ಲಿ ಹಾಕಿ, ಒಲಿದು ಸೀಲು ಮಾಡಿ, ಸದರಿ ಎಲ್ಲಾ ಮಧ್ಯದ ಟೆಟ್ರಾ ಪ್ಯಾಕೆಟ್ ಗಳನ್ನು ಹಾಗೂ ನಗದು ಹಣ ರೂ. 350/- ಹಾಗೂ ಬಿಳಿ ಬಣ್ಣದ ಬಟ್ಟೆಯ ಬ್ಯಾಗ್ ನ್ನು ಅಮಾನತ್ತುಪಡಿಸಿಕೊಂಡಿರುತ್ತೇವೆ. ಸದರಿ ಮಹಜರನ್ನು ಮಧ್ಯಾಹ್ನ 1.30 ರಿಂದ 2.30 ಗಂಟೆಯವರೆಗೆ ಜರುಗಿಸಿರುತ್ತೇವೆ. ಆ ಸಮಯದಲ್ಲಿ ಫೋಟೋ ಸಹ ತೆಗೆಸಿರುತ್ತೇವೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಅದು ಕೃತ್ಯ ಸ್ಥಳದಲ್ಲಿ ಜರುಗಿಸಿದ ಮಹಜರು ಎಂದು ಗುರುತಿಸಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ಕೃತ್ಯ ಸ್ಥಳದ ಮಹಜರನ್ನು ನಿಪಿ3 ಎಂದು, ಸಾಕ್ಷಿಯ ಸಹಿಯನ್ನು ನಿಪಿ3(ಎ) ಎಂದು

ಗುರುತಿಸಲಾಯಿತು. ಸಾಕ್ಷಿಗೆ ಮೂರು ಫೋಟೋಗಳನ್ನು ತೋರಿಸಲಾಗಿ, ಸಾಕ್ಷಿಯು ಅದು ನಿಪಿ3 ರಂತೆ ಮಹಜರ ಸಮಯದಲ್ಲಿ ತೆಗೆದ ಫೋಟೋಗಳು ಎಂದು ಗುರುತಿಸುತ್ತಾರೆ. ಈ ಸಂದರ್ಭದಲ್ಲಿ ಆರೋಪಿಗಳ ಪರ ವಕೀಲರು ಸದರಿ ಫೋಟೋಗಳಿಗೆ ಸಂಬಂಧಿಸಿದಂತೆ ಸಿಡಿ ಅಥವಾ ನೆಗೆಟಿವ್ ಹಾಜರುಪಡಿಸದ ಕಾರಣ ಸದರಿ ಫೋಟೋಗಳನ್ನು ಗುರುತಿಸಲು ಬರುವುದಿಲ್ಲ ಎಂದು ತಕರಾರು ಮಾಡಿದ್ದು, ಆರೋಪಿಗಳ ಪರ ವಕೀಲರ ತಕರಾರಿಗೆ ಒಳಪಟ್ಟು ಸದರಿ ಫೋಟೋಗಳನ್ನು ಕ್ರಮವಾಗಿ ನಿಪಿ4 ರಿಂದ 6 ಎಂದು ಗುರುತಿಸಲಾಯಿತು. ನಂತರ ಸದರಿ ಕೃತ್ಯ ಸ್ಥಳದಲ್ಲಿಯೇ ಆರೋಪಿಗೆ ದಂ ಪ್ರ ಸಂಹಿತೆ ಕಲಂ 41 ರಡಿಯಲ್ಲಿ ನೋಟಿಸ್ ನ್ನು ನೀಡಿ ವಿಚಾರಣೆಗೆ ಹಾಜರಾಗುವಂತೆ ಸೂಚಿಸಿರುತ್ತೇನೆ.

ನಂತರ ವಶಪಡಿಸಿಕೊಂಡ ಮಾಲುಗಳು ಠಾಣೆಗೆ ಹಿಂತಿರುಗಿ ಅಮಾನತ್ತುಪಡಿಸಿಕೊಂಡ ಸ್ವತ್ತುಗಳನ್ನು ಠಾಣಾ ಮಾಲು ಪಟ್ಟಿ ಸಂ. 30/2023 ರಂತೆ ದಾಖಲಿಸಿಕೊಂಡು ಅದನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ನಂತರ ಅದೇ ದಿನ ಚಾಸಾ-2 ರಿಂದ 7 ರವರ ಹೇಳಿಕೆಯನ್ನು ಪಡೆದುಕೊಂಡು ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ಅದೇ ದಿನ ಆರೋಪಿಯ ಸ್ವಇಚ್ಛಾ ಹೇಳಿಕೆಯನ್ನು ಪಡೆದುಕೊಂಡು ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ಅದೇ ದಿನ ಚಾಸಾ3 ರವರು ಮಹಜರಿನ ಸಮಯದಲ್ಲಿ ಫೋಟೋ ತೆಗೆದ ಬಾಬ್ತು ಸದರಿ ಫೋಟೋಗಳನ್ನು ಪ್ರಿಂಟ್ ಹಾಕಿಸಿ ಸದರಿ ಫೋಟೋ ಹಾಗೂ ಆ ಸಂಬಂಧ ಭಾರತ ಸಾಕ್ಷ್ಯ ಅಧಿನಿಯಮ 65ಬಿ ರಡಿಯಲ್ಲಿ ಪ್ರಮಾಣ ಪತ್ರ ಹಾಜರುಪಡಿಸಿದ್ದು ಅದನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಅದು ಚಾಸಾ3 ರವರು ಮೇಲೆ ಹೇಳಿದಂತೆ ಭಾ ಸಾ ಅಧಿನಿಯಮ 65ಬಿ ರಡಿಯಲ್ಲಿ ನೀಡಿದ ಪ್ರಮಾಣ ಪತ್ರ ಎಂದು ಗುರುತಿಸಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ಪ್ರಮಾಣ ಪತ್ರವನ್ನು ನಿಪಿ7 ಎಂದು, ಸಾಕ್ಷಿಯ ಸಹಿಯನ್ನು ನಿಪಿ7(ಎ) ಎಂದು ಗುರುತಿಸಲಾಯಿತು. ನಂತರ ದಿನಾಂಕ 03-03-2023 ರಂದು ರಾಸಾಯನಿಕ ಪರೀಕ್ಷೆಯ ಸಲುವಾಗ ಪ್ರತ್ಯೇಕವಾಗಿ ತೆಗೆದ 28 ಮಧ್ಯದ ಟೆಟ್ರಾ ಪ್ಯಾಕೆಟ್ ಗಳನ್ನು ನಮ್ಮ ಠಾಣಾ ಸಿಬ್ಬಂದಿಯಾದ ಚಾಸಾ9 ರವರ ಮೂಲಕ ಮೈಸೂರಿನ ಆರ್ ಎಫ್ ಎಸ್ ಎಲ್ ಗೆ ಕಳುಹಿಸಿ ಅವರಿಂದ ಸ್ವೀಕೃತಿಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ನಂತರ ದಿನಾಂಕ 08-03-2023 ರಂದು ರಾಸಾಯನಿಕ ಪರೀಕ್ಷೆಗೆ ಕಳುಹಿಸಿದ ಮಧ್ಯದ ಟೆಟ್ರಾ ಪ್ಯಾಕೆಟ್ ಗಳನ್ನು ಹೊರತು ಪಡಿಸಿ ಉಳಿದ 20 ಮಧ್ಯದ ಟೆಟ್ರಾ ಪ್ಯಾಕೆಟ್ ಗಳನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸುವ ಸಂಬಂಧ ಮಡಿಕೇರಿಯ

ಅಬಕಾರಿ ಉಪ ಆಯುಕ್ತರವರಿಗೆ ಅನುಮತಿ ಕೋರಿ ಮನವಿ ಪತ್ರ ಸಲ್ಲಿಸಿರುತ್ತೇನೆ. ಅದೇ ದಿನ ಆರೋಪಿಯ ವಶದಲ್ಲಿದ್ದ ಯಾರಿಗೆ ಮಾರಾಟ ಮಾಡಿರುತ್ತೀರಿ ಎಂದು ಮಾಹಿತಿ ಕೋರಿ ಚಾಸಾ10 ರವರಿಗೆ ದೃಢೀಕರಣ ಪತ್ರ ನೀಡುವಂತೆ ಮನವಿ ಪತ್ರ ಸಲ್ಲಿಸಿರುತ್ತೇನೆ. ನಂತರ ದಿನಾಂಕ 16-03-2023 ರಂದು ಮಡಿಕೇರಿಯ ಅಬಕಾರಿ ಉಪ ಆಯುಕ್ತರು ಅಮಾನತ್ತುಪಡಿಸಿಕೊಂಡ 20 ಮಧ್ಯದ ಟೆಟ್ರಾ ಪ್ಯಾಕೆಟ್ ಗಳನ್ನು ಅಬಕಾರಿ ಇಲಾಖೆಗೆ ಹಸ್ತಾಂತರಿಸಲು ಅನುಮತಿ ನೀಡಿದ್ದು, ಅದನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ಅದೇ ದಿನ ಸದರಿ 20 ಮಧ್ಯದ ಟೆಟ್ರಾ ಪ್ಯಾಕೆಟ್ ಗಳನ್ನು ವಿರಾಜಪೇಟೆಯ ಅಬಕಾರಿ ನಿರೀಕ್ಷಕರಿಗೆ ಹಸ್ತಾಂತರಿಸಿ, ಅವರಿಂದ ಸ್ವೀಕೃತಿಯನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಂತರ ದಿನಾಂಕ 17-03-2023 ರಂದು ಚಾಸಾ-10 ರವರು ಈ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡ ಮಧ್ಯದ ಟೆಟ್ರಾ ಪ್ಯಾಕೆಟ್ ಗಳನ್ನು ಚಾಸಾ8 ರವರ ಮಧ್ಯದ ಅಂಗಡಿಗೆ ಸರಬರಾಜು ಮಾಡಿರುವುದಾಗಿ ದೃಢೀಕರಣ ಪತ್ರ ನೀಡಿರುತ್ತಾರೆ. ಅದನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಅದು ಮೇಲೆ ಹೇಳಿದಂತೆ ಚಾಸಾ10 ರವರು ನೀಡಿದ ದೃಢೀಕರಣ ಪತ್ರ ಎಂದು ಗುರುತಿಸಿ, ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ದೃಢೀಕರಣ ಪತ್ರವನ್ನು ನಿಪಿ8 ಎಂದು, ಸಾಕ್ಷಿಯ ಸಹಿಯನ್ನು ನಿಪಿ8(ಎ) ಎಂದು ಗುರುತಿಸಲಾಯಿತು. ನಂತರ ಅದೇ ದಿನ ಚಾಸಾ8 ರವರಿಗೆ ವಿಚಾರಣೆಗೆ ಹಾಜರಾಗುವಂತೆ ನೋಟಿಸ್ ನ್ನು ನೀಡಿ, ಅವರು ವಿಚಾರಣೆಗೆ ಹಾಜರಾದ ಮೇರೆಗೆ ಅದೇ ಅವರ ಹೇಳಿಕೆಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ.

ನಂತರ ದಿನಾಂಕ 21-03-2023 ರಂದು ಚಾಸಾ-11 ರವರಿಂದ ರಾಸಾಯನಿಕ ಪರೀಕ್ಷೆಯ ವರದಿಯನ್ನು ಸ್ವೀಕರಿಸಿಕೊಂಡು ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಅದು ಮೇಲೆ ಹೇಳಿದಂತೆ ಚಾಸಾ11 ರವರು ನೀಡಿದ ರಾಸಾಯನಿಕ ಪರೀಕ್ಷೆಯ ವರದಿ ಎಂದು ಗುರುತಿಸಿ, ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ರಾಸಾಯನಿಕ ಪರೀಕ್ಷೆಯ ವರದಿಯನ್ನು ನಿಪಿ9 ಎಂದು, ಸಾಕ್ಷಿಯ ಸಹಿಯನ್ನು ನಿಪಿ9(ಎ) ಎಂದು ಗುರುತಿಸಲಾಯಿತು.

ನಂತರ ಅದೇ ದಿನ ಅಂದರೆ ದಿನಾಂಕ 21-03-2023 ರಂದು ತನಿಖೆಯನ್ನು ಪೂರ್ಣಗೊಳಿಸಿ, ಆರೋಪಿ ವಿರುದ್ಧ ದೋಷರೋಪ ಸಾಬೀತಾದ್ದರಿಂದ

ತನಿಖೆಯನ್ನು ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ 28 ಮಧ್ಯದ ಟೆಟ್ರಾ ಪ್ಯಾಕೆಟ್ ಗಳನ್ನು, ಒಂದು ಬಟ್ಟೆಯ ಬ್ಯಾಗ್ ಹಾಗೂ ಐವತ್ತು ಮುಖಬೆಲೆಯ 07 ನೋಟುಗಳು ಒಟ್ಟಾರೆಯಾಗಿ ರೂ. 350/- ನಗದು ಹಣವನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ಮಧ್ಯದ ಟೆಟ್ರಾ ಪ್ಯಾಕೆಟ್ ಗಳನ್ನು ಒಟ್ಟಾರೆಯಾಗಿ ಮು ಮಾ 1 ಎಂದು, ಬಟ್ಟೆಯ ಬ್ಯಾಗ್ ನ್ನು ಮು ಮಾ 2 ಎಂದು ಹಾಗೂ ರೂ. 350/- ನಗದು ಹಣವನ್ನು ಮು ಮಾ 3 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿ ಗುರುತಿಸುತ್ತಾರೆ.

**<u>ಪಾಟಿ ಸವಾಲು ಃ ಶ್ರೀ. ಹೆಚ್ ಆರ್ ಎ ಆರೋಪಿ ಪರ ವಕೀಲರಿಂದ ಃ</u>**

ನಾನು ಸದರಿ ದಿನದಂದು ಗಸ್ತಿನ ಸಂಬಂಧ ಬೆಳಿಗ್ಗೆ ಸುಮಾರು 11 ಗಂಟೆಗೆ ಠಾಣೆಯಿಂದ ಹೊರಟಿರುತ್ತೇವೆ. ನಾನು ಹಾಗೂ ಚಾಸಾ2 ರಿಂದ 5 ರವರು ಸದರಿ ದಿನದಂದು ಕರ್ತವ್ಯದಲ್ಲಿದ್ದ ಬಗ್ಗೆ ಯಾವುದೇ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸಾಕ್ಷಿ ಮುಂದುವರೆದು ಆ ಬಗ್ಗೆ ಹಾಜರಾತಿ ಬಗ್ಗೆ ಡೈರಿಯಲ್ಲಿ ನಮೂದಾಗಿರುತ್ತದೆ ಎಂದು ನುಡಿಯುತ್ತಾರೆ. ಗಸ್ತುವಿಗೆ ಹೋದ ಬಗ್ಗೆ ಪ್ರತ್ಯೇಕ ಯಾವುದೇ ಡೈರಿ ಇರುವುದಿಲ್ಲ. ನಾವು ವಿರಾಜಪೇಟೆಯ ಪಂಜರಪೇಟೆಯ ಬಳಿ ಗಸ್ತು ಕರ್ತವ್ಯದಲ್ಲಿದಾಗ ಬಾತ್ಮಿದಾರರಿಂದ ಮಾಹಿತಿ ಬಂದಿರುತ್ತದೆ. ಸದರಿ ಪಂಜರಪೇಟೆಯಿಂದ ಕೃತ್ಯ ನಡೆದ ಸ್ಥಳಕ್ಕೆ ಸುಮಾರು ಒಂದು ಕಿ. ಮೀ. ಅಂತರವಿರುತ್ತದೆ. ಪಂಚರಾದ ಚಾಸಾ6 ಹಾಗೂ 7 ರವರನ್ನು ಪ್ರಕರಣ ದಾಖಲಿಸಿದ ನಂತರ ಠಾಣೆಗೆ ಬರಮಾಡಿಕೊಂಡಿರುತ್ತೇನೆ. ಚಾಸಾ6 ಹಾಗೂ 7 ರವರ ಬಗ್ಗೆ ವಿವರವನ್ನು ನಮ್ಮ ಸಿಬ್ಬಂದಿಗಳ ಮೂಲಕ ಪಡೆದುಕೊಂಡಿರುತ್ತೇನೆ. ನಾವು ಮಧ್ಯಾಹ್ನ ಸುಮಾರು 1.25 ಗಂಟೆಗೆ ಕೃತ್ಯ ಸ್ಥಳಕ್ಕೆ ತಲುಪಿರುತ್ತೇವೆ.

ಚಾಸಾ-6 ಹಾಗೂ 7 ರವರು ಕೃತ್ಯ ಸ್ಥಳಕ್ಕೆ ಅವರ ಬೈಕ್ ನಲ್ಲಿ ಬಂದಿರುತ್ತಾರೆ. ಕಾವೇರಿ ಕಾಲೇಜು ಜಂಕ್ಷನ್ ಬಳಿ ಅಂಗಡಿ ಮುಂಗಟ್ಟು, ಮನೆಗಳು ಹಾಗೂ ಮೈಸೂರಿಗೆ ಹೋಗುವ ಮುಖ್ಯ ರಸ್ತೆ ಇರುತ್ತದೆ ಎಂದರೆ ಸರಿ. ನಾವು ಕೃತ್ಯ ಸ್ಥಳಕ್ಕೆ ಹೋದಾಗ ಬಸ್ ನಿಲ್ದಾಣದಲ್ಲಿ ಆರೋಪಿ ಮಾತ್ರ ಇದ್ದಿದ್ದರು. ನಮ್ಮನ್ನು ನೋಡಿದ ಆರೋಪಿ ಗಾಬರಿಯಾಗಿ ಓಡಲು ಪ್ರಯತ್ನಿಸಿರುತ್ತಾರೆ. ಆಗ ನಾವೆಲ್ಲರೂ ಸೇರಿ ಅವರನ್ನು ಸುತುವರೆದಿರುತ್ತೇವೆ. ಮಧ್ಯದ ಟೆಟ್ರಾ ಪ್ಯಾಕೆಟ್ ಗಳಿದ್ದ ಬಟ್ಟೆಯ ಬ್ಯಾಗ್ ಆ ಸಮಯದಲ್ಲಿ ಆರೋಪಿಯ ಕೈಯಲ್ಲೇ ಇದ್ದಿರುತ್ತದೆ. ಮು ಮಾ 3 ನಗದು ಹಣ ಆರೋಪಿಯ ಶರ್ಟ್ ಜೇಬಿನಲ್ಲಿದ್ದಿರುತ್ತದೆ. ನಿಪಿ 3 ಕೃತ್ಯ ಸ್ಥಳದ ಮಹಜರನ್ನು ನನ್ನ

ಉಕ್ತಲೇಖನದ ಮೇರೆಗೆ ಚಾಸಾ2 ರವರು ಬರೆದಿರುತ್ತಾರೆ. ನಾವು ಯಾವುದೇ ಕೃತ್ಯ ನಡೆಯಲಾಯಿತು ಎಂದು ಹೇಳಿದ ಸ್ಥಳಕ್ಕೆ ಹೋಗಿರುವುದಿಲ್ಲ ಹಾಗೂ ಅಲ್ಲಿ ಆರೋಪಿ ಯಾವುದೇ ಅಕ್ರಮವಾಗಿ ಮದ್ಯವನ್ನು ಇಟ್ಟುಕೊಂಡು ಮಾರಾಟ ಮಾಡುತ್ತಿರಲಿಲ್ಲ ಹಾಗೂ ನಾವು ಅಲ್ಲಿ ಯಾವುದೇ ಮಹಜರ ಕ್ರಮಮ ಜರುಗಿಸಿ ಮು ಮಾ 1 ರಿಂದ 3 ಸ್ವತ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ, ಬದಲಾಗಿ ನಿಪಿ3 ಮಹಜರನ್ನು ಠಾಣೆಯಲ್ಲೆ ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

ಮು ಮಾ 1 ರಂತಹ ಮದ್ಯದ ಟೆಟ್ರಾ ಪ್ಯಾಕೆಟ್ ಗಳು ಎಲ್ಲಾ ಮದ್ಯದ ಅಂಗಡಿಯಲ್ಲಿ ಸಿಗುತ್ತವೆ ಎಂದರೆ ಸಾಕ್ಷಿಯು ಅವುಗಳ ಕ್ರಮ ಸಂಖ್ಯೆ ಬೇರೆ ಬೇರೆ ಯಾಗಿರುತ್ತದೆ ಎಂದು ನುಡಿಯುತ್ತಾರೆ. ಅಮಾನತ್ತುಪಡಿಸಿಕೊಂಡ 48 ಮದ್ಯದ ಟೆಟ್ರಾ ಪ್ಯಾಕೆಟ್ ಗಳಲ್ಲಿ 28 ಮದ್ಯದ ಟೆಟ್ರಾ ಪ್ಯಾಕೆಟ್ ಗಳನ್ನು ಮಾತ್ರ ರಾಸಾಯನಿಕ ಪರೀಕ್ಷೆಗೆ ಕಳುಹಿಸಿರುತ್ತೇವೆ. ನಾನು ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ ಬದಲಾಗಿ ಅವುಗಳನ್ನು ಈ ಪ್ರಕರಣಕ್ಕೆ ಅನುಕೂಲವಾಗುವ ರೀತಿಯಲ್ಲಿ ನಾನೇ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ನಾನೇ ಸ್ವವರದಿ ತಯಾರಿಸಿ, ಪ್ರಕರಣ ದಾಖಲಿಸಿ, ಸಂಪೂರ್ಣ ತನಿಖೆಯನ್ನು ನಾನೇ ಮಾಡಿರುತ್ತೇನೆ ಎಂದರೆ ಸರಿ. ನಾನು ಯಾವುದೇ ರಾಸಾಯನಿಕ ಪರೀಕ್ಷೆಯ ವರದಿಯನ್ನು ಪಡೆದುಕೊಂಡಿರುವುದಿಲ್ಲ ಬದಲಾಗಿ ನಿಪಿ9 ನ್ನು ಈ ಪ್ರಕರಣಕ್ಕೆ ನಾನೇ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ4 ರಿಂದ 6 ಫೋಟೋಗಳನ್ನು ಈ ಪ್ರಕರಣಕ್ಕೊಸ್ಕರ ಸೃಷ್ಟಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೂ ಮು ಮಾಲಿಗೂ ಹಾಗೂ ಆರೋಪಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ಬೇರೋ ಯಾವುದೋ ಪ್ರಕರಣದ ಮದ್ಯದ ಟೆಟ್ರಾ ಪ್ಯಾಕೆಟ್ ಗಳನ್ನು ಬಳಸಿಕೊಂಡು ಅಮಾಯಕನಾದ ಆರೋಪಿಯ ವಿರುದ್ದ ಸುಳ್ಳು ಪ್ರಕರಣ ದಾಖಲಿಸಿ, ಸುಳ್ಳು ತನಿಖೆ ನಡೆಸಿ, ಸುಳ್ಳು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಿಂದ ಬೆರಳಚ್ಚು ಪಡಿಸಲಾಯಿತು.)

ಓ. ಹೇ. ಕೇ. ಸ. ಇದೆ.

ಸಹಿ/-
(ಸಂತೋಷ ಕೊಠಾರಿ)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ವಿರಾಜಪೇಟೆ.